■ ಹನಿ

## ಮದುಮಗ ವಾಸಿಂ



ಕ್ರಿಕೆಟ್ ಜಗತ್ತಿನ ಅತ್ಯುತ್ತಮ ಎಡಗೈ ವೇಗಿ ವಾಸಿಂ ಅಕ್ರಂ, ಜೀವನದಲ್ಲಿ ಎರಡನೇ ಬಾರಿಗೆ 'ಕ್ಲೀನ್ ಬೌಲ್ಡ್' ಆಗಿದ್ದಾನೆ. 47ರ ಹರೆಯದ ಈ ಸ್ಫುರದ್ರೂಪಿ ಕ್ರಿಕೆಟಿಗ 30ರ ಹರೆಯದ ಆಸ್ಟ್ರೇಲಿಯನ್ ಹುಡುಗಿ ಶನೀರಾ ಥಾಮ್ಸನ್‌ಳನ್ನು ಮದುವೆಯಾಗಿದ್ದಾನೆ. ಮೊದಲ ಪತ್ನಿ ಹುಮಾ ಜತೆಗೆ 15 ವರ್ಷಗಳ ಸಂಸಾರದಲ್ಲಿ ಎರಡು ಮಕ್ಕಳನ್ನು ಪಡೆದಿದ್ದ ಅಕ್ರಂ, 2009ರಲ್ಲಿ ಪತ್ನಿ ಬೆಂಗಳೂರಿನಲ್ಲಿ ನಿಧನಳಾದಂದಿನಿಂದ ಒಂಟಿಯಾಗೇ ಇದ್ದ. 2011ರಲ್ಲಿ ಮೆಲ್ಬೋರ್ನ್‌ನಲ್ಲಿ ಶನೀರಾಳನ್ನು ಭೇಟಿಯಾದ ಬಳಿಕ ಆಕೆಯ ಪ್ರೇಮಪಾಶಕ್ಕೆ ಬಿದ್ದ. ಎರಡು ವರ್ಷಗಳ ನಿಕಟ ಸ್ನೇಹ ಈಗ ನಿಖಾಹ್‌ನೊಂದಿಗೆ ಹೊಸ ಮಜಲಿಗೆ ತಲುಪಿದೆ. ಒಂದು ವರ್ಷದಿಂದ ಅಕ್ರಂನ ಇಬ್ಬರು ಮಕ್ಕಳ ಜತೆಗೂ ಶನೀರಾ ನಿಕಟ ಸ್ನೇಹ ಬೆಳೆಸಿಕೊಂಡಿದ್ದಳು. ಪಾಕ್ ಕ್ರಿಕೆಟ್ ತಂಡದ ನಾಯಕ ಇಮ್ರಾನ್ ಖಾನ್ ಇಂಗ್ಲೆಂಡಿನ ಸುಂದರಿಯನ್ನು ವರಿಸಿ ಸುದ್ದಿ ಮಾಡಿದಂತೆಯೇ, ಆತನ ಉತ್ತರಾಧಿಕಾರಿ ವಾಸಿಂ ಅಕ್ರಂ ಕೂಡಾ ಆಸ್ಟ್ರೇಲಿಯನ್ ಸುಂದರಿಯನ್ನು ವರಿಸಿದ್ದಾನೆ. ಪಿಆರ್ ಕನ್ಸಲ್ಟೆಂಟ್ ಆಗಿದ್ದ ಶನೀರಾ, ಕೆಲವು ತಿಂಗಳ ಹಿಂದೆಯೇ ಇಸ್ಲಾಂ ಧರ್ಮ ಸ್ವೀಕರಿಸಿದ್ದು ಪಾಕಿಸ್ತಾನಿ ಅಡುಗೆಯನ್ನೂ ಕಲಿತುಕೊಂಡಿದ್ದಾಳಂತೆ. ಈ ಸಲದ ಈದ್‌ಅನ್ನು ಪಾಕಿಸ್ತಾನದಲ್ಲಿ ಜತೆಯಾಗಿ ಆಚರಿಸಿದ್ದು ಬಳಿಕ ಮೂರೇ ದಿನದಲ್ಲಿ ಮದುವೆ ಆಗಿದೆ.

ಜಾವೇದ್ ಮಿಯಾಂದಾದ್ ಪ್ರಬಲವಾಗಿದ್ದ ಕಾಲದಲ್ಲಿ ವಾಸಿಂ ಅಕ್ರಂನನ್ನು ಶಿಫಾರಸ್ಸು ಮಾಡಿ ತಂಡಕ್ಕೆ ಸೇರಿಸಿಕೊಂಡಿದ್ದ. ಇಯಾನ್ ಬಾಥಂ ಮತ್ತು ಬ್ರಿಯಾನ್ ಲಾರಾರಂತಹ ಕ್ರಿಕೆಟ್ ದಿಗ್ಗಜರೇ ವಾಸಿಂ ಬೌಲಿಂಗ್ ಚಾಕಚಕ್ಯತೆಗೆ ದಿಗ್ಭ್ರಮೆ ವ್ಯಕ್ತಪಡಿಸಿದ್ದರು. ಅದಕ್ಕೆ ತಕ್ಕಂತೆ ಅಕ್ರಂನ ರಿವರ್ಸ್ ಸ್ವಿಂಗ್ ಸುದ್ದಿ ಮಾಡಿತು. ವಿಶ್ವ ಕ್ರಿಕೆಟ್‌ನಲ್ಲಿ ಒಂದೇ ಎಸೆತವನ್ನು ಎಡಕ್ಕೂ, ಬಲಕ್ಕೂ ಡಬಲ್ ಸ್ವಿಂಗ್ ಮಾಡಬಲ್ಲ ಏಕೈಕ ವೇಗಿ ಎಂಬ ಖ್ಯಾತಿಯೂ ಈತನಿಗಿತ್ತು. 1992ರಲ್ಲಿ ಈತನ ರಿವರ್ಸ್ ಸ್ವಿಂಗ್ ಎಸೆತಗಳನ್ನು ಎದುರಿಸಲಾಗದೆ ಇಂಗ್ಲೆಂಡಿನ ಆಟಗಾರರು ಚೆಂಡು ತಿರುಚಿದ್ದಾನೆ ಎಂಬ ಆರೋಪ ಹೊರಿಸಿದ್ದರು! 1992ರಲ್ಲಿ ಪಾಕಿಸ್ತಾನ ಗಳಿಸಿದ ಏಕೈಕ ವಿಶ್ವಕಪ್‌ನಲ್ಲಿ ಈತನೇ– ಸರಣಿಶ್ರೇಷ್ಠ ಆಟಗಾರ. 1999ರಲ್ಲಿ ಸ್ವತಃ ತಂಡದ ನಾಯಕನಾಗಿ ಈತ ಪಾಕಿಸ್ತಾನವನ್ನು ವಿಶ್ವ-ಕಪ್ ಫೈನಲ್‌ವರೆಗೆ ಒಯ್ದಿದ್ದ. ಒಂದು ದಿನದ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಟ್ಟು 502 ವಿಕೆಟ್ ಗಳಿಸಿ ಮುತ್ತಯ್ಯ ಮುರಳೀಧರನ್ ನಂತರದ ಸ್ಥಾನ ಪಡೆದಿರುವ ಅಕ್ರಂ, ಕ್ರಿಕೆಟ್ ಆಡುವ ದೇಶಗಳಲ್ಲಿ ಅಪಾರ ಅಭಿಮಾನಿಗಳಿಗೆ ಹೀರೊ. 'ಮ್ಯಾಚ್ ಫಿಕ್ಸಿಂಗ್'ನ ಕರಿನೆರಳು ಈತನ ಮೇಲೂ ಇತ್ತಾದರೂ ಸಂಶಯಲಾಭದಿಂದಾಗಿ ವಿವಾದ ಹೆಚ್ಚು ಬೆಳೆಯಲಿಲ್ಲ.

ಈ ದೃಢಕಾಯ ಕ್ರಿಕೆಟಿಗನಿಗೆ 30ರ ಹರೆಯದಲ್ಲೇ ಡಯಾಬಿಟಿಸ್ ಬಂದದ್ದು ವಿಚಿತ್ರವೇ. ಈಗ ಡಯಾ-ಬಿಟಿಸ್ ವಿರುದ್ಧ ಪ್ರಚಾರ ಅಭಿಯಾನದಲ್ಲೂ ಈತ ಸಕ್ರಿಯ. ಇಳಿವಯಸ್ಸಿನಲ್ಲಿ ಸುಂದರಿಯೊಬ್ಬಳು ಎರಡನೇ ಜೀವನಸಂಗಾತಿ ಆಗಿರುವುದರಿಂದ ವೈಯಕ್ತಿಕ ಬದುಕಿಗೆ ಲಾಭವಾಗುವುದು ಖಂಡಿತಾ. ಕೋಲ್ಕತ್ತಾ ನೈಟ್‌ರೈಡರ್ಸ್‌ಗೆ ಬೌಲಿಂಗ್ ಕೋಚ್ ಆಗಿದ್ದ ಅಕ್ರಂ, ಹಲವು ವಿಶ್ವ ಟೂರ್ನಿಗಳಲ್ಲಿ ಅತ್ಯುತ್ತಮ ಕಾಮೆಂಟ್ರೇಟರ್ ಆಗಿಯೂ ಹೊರಹೊಮ್ಮಿದ್ದಾನೆ.

## ಮರಿಯಾ ಸುಗರ್‌ಪೋವ!



ಸದ್ಯಕಿದು ಮರಿಯಾ ಕಾಲ. ಆಕೆ ಮುಟ್ಟಿದ್ದೆಲ್ಲ ಚಿನ್ನ. ಕಳೆದ 9 ವರ್ಷಗಳಿಂದ ಜಗತ್ತಿನ ಅತ್ಯಂತ ಹೆಚ್ಚು ಹಣ ಗಳಿಸುತ್ತಿರುವ ಮಹಿಳಾ ಕ್ರೀಡಾಪಟುಗಳ ಪಟ್ಟಿಯಲ್ಲಿ ಮರಿಯಾ ಶೆರಪೋವಾಳೇ ನಂಬರ್ ಒನ್. ಫೋರ್ಬ್ಸ್ ಪಟ್ಟಿಯಲ್ಲಿ ಈ ವರ್ಷವೂ ಆಕೆ ಮೊದಲ ಸ್ಥಾನ ಬಿಟ್ಟುಕೊಟ್ಟಿಲ್ಲ. ಈ ವರ್ಷದ ಆಕೆಯ ಟೆನಿಸ್ ಬಹುಮಾನ, ಜಾಹೀರಾತು ಆದಾಯದ ಒಟ್ಟು ಮೊತ್ತ 29 ದಶಲಕ್ಷ ಡಾಲರ್!

6 ಅಡಿ 2 ಇಂಚು ಎತ್ತರದ ಈ ಸುರಸುಂದರಿ, 17ರ ಹರೆಯದಲ್ಲಿ (2004ರಲ್ಲಿ) ಮೊದಲ ವಿಂಬಲ್ಡನ್ ಕಿರೀಟ ಗೆದ್ದಾಗಲೇ ಅದೃಷ್ಟ ಒದ್ದುಕೊಂಡು ಬಂತು. ಕಳೆದ ವರ್ಷ ಫ್ರೆಂಚ್ ಓಪನ್ ಗೆಲ್ಲುವವರೆಗೆ ಆಕೆಯ ಗೆಲುವಿನ ಓಟಕ್ಕೆ ಅಡ್ಡಿ ಬಂದೇ ಇಲ್ಲ. ನೈಕ್, ಹೆಡ್, ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್,ಟ್ಯಾಗ್ ಹೂವರ್, ಎವಿಯಾನ್, ಪಾರ್ಶ್ಚೆ ಮುಂತಾಗಿ ವಿಶ್ವಖ್ಯಾತಿಯ ಬ್ರಾಂಡ್‌ಗಳೆಲ್ಲವೂ ಈಕೆಯ ಪ್ರಾಯೋಜಕತ್ವ ಹೊಂದಿವೆ. ಕಳೆದ ವರ್ಷ ಈಕೆ ಆರಂಭಿಸಿದ ಸುಗರ್‌ಪೋವಾ ಎಂಬ ಕ್ಯಾಂಡಿ ಬಿಸಿನೆಸ್ ಭರ್ಜರಿ ಆರಂಭ ಕಂಡಿದೆ. 5 ಡಾಲರ್ ಬೆಲೆಯ ಈ ಕ್ಯಾಂಡಿಯ 15 ಲಕ್ಷ ಬ್ಯಾಗ್‌ಗಳನ್ನು ಕಂಪೆನಿ ಮಾರಾಟ ಮಾಡಿದೆಯಂತೆ. ಈ ಸಲದ ಅಮೆರಿಕ ಓಪನ್ ಟೆನಿಸ್‌ನಲ್ಲಿ ತನ್ನ ಹೆಸರನ್ನು ಮರಿಯಾ ಸುಗರ್‌ಪೋವಾ ಎಂದು ತಾತ್ಕಾಲಿಕವಾಗಿ ಬದಲಾಯಿಸಲು ಈಕೆ ಈಗಾಗಲೆ ಅರ್ಜಿ ಹಾಕಿದ್ದಾಳೆ. ಸಂಘಟಕರು ಅನುಮತಿ ಕೊಟ್ಟರೆ ಈಕೆಯ ಸುಗರ್‌ಪೋವಾ ಕ್ಯಾಂಡಿಗೆ ಭರ್ಜರಿ ಪ್ರಚಾರ ಸಿಕ್ಕಲಿದೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65